



ಅರುಣ ಪಿ. ಭಟ್ಟ

## ವಾರಭವಿಷ್ಯ 26.05.2022ರಿಂದ 01.06.2022ವರೆಗೆ



**ಮೇಷ**

ಮನೆಯ ನವೀಕರಣಕ್ಕೆ ಹಣ ಖರ್ಚು ಮಾಡುವ ಸಾಧ್ಯತೆ ಇದೆ. ದಾನ ಧರ್ಮ ಕಾರ್ಯಗಳಲ್ಲಿ ಆಸಕ್ತಿ ಮೂಡುತ್ತದೆ. ವೃತ್ತಿ ವ್ಯಾಪಾರ, ಉದ್ಯೋಗ ವಿಚಾರದಲ್ಲಿ ದೊಡ್ಡ ಮಟ್ಟದ ಅಧಿಕಾರಿಗಳು ವ್ಯವಹಾರಸ್ಥರು ವ್ಯಾಪಾರಸ್ಥರ ಜತೆಗೆ ಮಾತುಕತೆ ನಡೆಸುವ ಯೋಗ ಇದೆ. ಸೋದರ ಸೋದರಿಯರ ಜತೆಗೆ ಬಾಂಧವ್ಯ ಗಟ್ಟಿಯಾಗುತ್ತದೆ. ಶುಭದಿನ 29. ಸೌಂದರ್ಯ ಲಹರಿ ಪಠಿಸಿರಿ.



**ವೃಷಭ**

ಹಣಕಾಸು ವ್ಯವಹಾರದಲ್ಲಿ ಪ್ರಗತಿ ಇದೆ. ವಿದೇಶದಲ್ಲಿ ಇರುವವರಿಗೆ ಪ್ರಗತಿ ಇದೆ. ಮನೆಗೆ ಅಗತ್ಯ ಇರುವ, ದುಬಾರಿ ವಸ್ತುಗಳನ್ನು ಖರೀದಿಸುವ ಯೋಗ ಇದೆ. ಪ್ರೀತಿಪಾತ್ರರು ಸಂಗಾತಿಯೊಂದಿಗೆ ಬಾಂಧವ್ಯ ಗಟ್ಟಿಯಾಗಲಿದೆ. ವೃತ್ತಿಪರರಿಗೆ ಒತ್ತಡ. ಅನಗತ್ಯ ವಿವಾದಗಳಲ್ಲಿ ನಿಮ್ಮನ್ನು ವಿರೋಧಿಗಳು ಎಳೆಯುವ ಸಾಧ್ಯತೆ ಇದೆ. ಶುಭದಿನ 26. ಹನುಮಾನ್ ಚಾಲೀಸ್ ಓದಿರಿ.



**ಮಿಥುನ**

ಸಂತಾನ ಅಪೇಕ್ಷಿತ ದಂಪತಿಗೆ ಶುಭ ಸುದ್ದಿ. ವಿದ್ಯಾರ್ಥಿಗಳಿಗೆ ಶೈಕ್ಷಣಿಕ ರಂಗದಲ್ಲಿ ಪ್ರಗತಿ ಇದೆ. ಹಿರಿಯರು, ಅನುಭವಿಗಳ ನೆರವು ಮತ್ತು ಮಾರ್ಗದರ್ಶನ ದೊರೆಯಲಿದೆ. ಹೆಚ್ಚುವರಿ ಆದಾಯವನ್ನು ಮುಂದಿನ ಹಂತಕ್ಕೆ ತೆಗೆದುಕೊಂಡು ಹೋಗಲು ಸೂಕ್ತ ವೇದಿಕೆ ದೊರೆಯಲಿದೆ. ವಿರೋಧಿಗಳು ಈಗ ಅನಗತ್ಯ ವಾಗ್ವಾದಗಳನ್ನು ಎಳೆದು ತರಬಹುದು. ಶುಭದಿನ 29. ಶ್ರೀ ದತ್ತಗುರು ಸ್ತೋತ್ರ ಪಠಿಸಿರಿ.



**ಕಟಕ**

ವೃತ್ತಿ ಸೇವಾ ವಲಯದಲ್ಲಿ ಇರುವವರಿಗೆ ಅಂದುಕೊಂಡಂಥ ಫಲಿತಾಂಶ ದೊರೆಯಲಿದೆ. ನಿಮ್ಮ ಯೋಜನೆಗಳು ಹಾಗೂ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಮೇಲಧಿಕಾರಿಗಳ ಜತೆ ಮುಖ್ಯವಾದ ಚರ್ಚೆಯಲ್ಲಿ ತೊಡಗಿಕೊಳ್ಳಲಿದ್ದೀರಿ. ಈ ಹಿಂದಿನ ಆರೋಗ್ಯ ಸಮಸ್ಯೆಗಳು ನಿವಾರಣೆ ಆಗುವ ಯೋಗ ಇದೆ. ಆರ್ಥಿಕ ಸ್ಥಿತಿ ಉತ್ತಮಪಡಿಸಿಕೊಳ್ಳುವುದಕ್ಕೆ ಅವಕಾಶ ದೊರೆಯಲಿದೆ. ಶುಭದಿನ 28. ಲಿಂಗಾಷ್ಟಕ ಪಠಿಸಿರಿ.



**ಸಿಂಹ**

ನೀವು ಕೆಲಸ ಮಾಡುತ್ತಿರುವ ಸಂಸ್ಥೆಯಲ್ಲಿ ಪ್ರಶಸ್ತಿ ಗೌರವಕ್ಕೆ ನಿಮ್ಮ ಹೆಸರನ್ನು ಸೂಚಿಸುವ ಯೋಗ ಇದೆ. ಈ ಅವಧಿಯಲ್ಲಿ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವ ಅವಕಾಶ ಇದೆ. ವೃತ್ತಿಪರ ಕೆಲಸಗಳನ್ನು ಈ ಹಿಂದಿಗಿಂತಲೂ ಪರಿಣಾಮಕಾರಿಯಾಗಿ ಮಾಡುವಿರಿ. ವ್ಯಾಪಾರಸ್ಥರಿಗೆ ಆದಾಯದಲ್ಲಿ ಹೆಚ್ಚಳ ಆಗಲಿದೆ. ಶುಭದಿನ 27. ಕಾಲಭೈರವನ ಸೇವೆ ಮಾಡಿರಿ.



**ಕನ್ಯಾ**

ಬಂಧುಗಳೊಂದಿಗೆ ಉತ್ತಮವಾದ ಕ್ಷಣಗಳನ್ನು ಕಳೆಯಲಿದ್ದೀರಿ. ಕಾನೂನು ವ್ಯಾಜ್ಯಗಳು ಇದ್ದಲ್ಲಿ ಅದರಲ್ಲಿ ನಿಮ್ಮ ಪರವಾದ ಬೆಳವಣಿಗೆಗಳು ಆಗಲಿವೆ. ಸರಿಯಾದ ಸಮಯಕ್ಕೆ ವಿರೋಧಿಗಳಿಗೆ ತಕ್ಕ ಪ್ರತ್ಯುತ್ತರ ನೀಡಲಿದ್ದೀರಿ. ಸಾಮಾಜಿಕ ರಾಜಕೀಯ ಕ್ಷೇತ್ರದಲ್ಲಿ ಇರುವವರಿಗೆ ಮನ್ನಣೆ ಸಿಗಲಿದೆ. ವೈವಾಹಿಕ ಜೀವನ ಸಂತುಷ್ಟವಾಗಿರುತ್ತದೆ. ಶುಭದಿನ 28. ಶ್ರೀ ಲಕ್ಷ್ಮೀಕನಕಧಾರಾ ಸ್ತೋತ್ರ ಪಠಣ ಮಾಡಿರಿ.



**ತುಲಾ**

ವೈವಾಹಿಕ ಜೀವನ ಸಂತೋಷವಾಗಿ ಇರುವ ಸಮಯ. ಸಂಗಾತಿ, ಮಕ್ಕಳಿಗೆ ಇರುವ ಭಿನ್ನ ಆಲೋಚನೆಗಳನ್ನು ಸಹ ಒಂದು ಹಂತಕ್ಕೆ ಸರಿಪಡಿಸುವಿರಿ. ಯಾರಿಗೆ ಮದುವೆಗೆ ಸಂಬಂಧ ಹುಡುಕಲಾಗುತ್ತಿದೆಯೋ ಅಂಥವರಿಗೆ ಸೂಕ್ತ ಸಂಬಂಧ ದೊರೆಯಲಿದೆ. ವೃತ್ತಿನಿರತರಿಗೆ ಅಂದುಕೊಂಡ ಹುದ್ದೆಯನ್ನು ತಲುಪಿಕೊಳ್ಳುವ ಅವಕಾಶ ಇದೆ. ಶುಭದಿನ 29. ವಿಷ್ಣು ಸಹಸ್ರನಾಮ ಪಠಿಸಿರಿ.



**ವೃಶ್ಚಿಕ**

ವೃತ್ತಿಪರ ಜೀವನದಲ್ಲಿ ಅತ್ಯುತ್ತಮವಾದ ಪ್ರಗತಿ ಇದೆ. ಹಣಕಾಸು ಹೂಡಿಕೆ ವ್ಯವಹಾರದಲ್ಲಿ ಅಂದುಕೊಂಡಂತೆಯೇ ಪ್ರಗತಿ ಸಾಧಿಸುವಿರಿ. ವಿರೋಧಿಗಳು ಸಣ್ಣ ಪುಟ್ಟ ಸಮಸ್ಯೆಗಳನ್ನು ಮಾಡಬಹುದು. ವೈವಾಹಿಕ ಜೀವನ ಸಂತೋಷವಾಗಿರುವುದಕ್ಕೆ ಬಹಳ ಶ್ರಮ ವಹಿಸುತ್ತೀರಿ. ಅವಿವಾಹಿತರಿಗೆ ಸೂಕ್ತ ಸಂಬಂಧಗಳು ದೊರೆಯುವ ಯೋಗ ಇದೆ. ಶುಭದಿನ 31. ಶ್ರೀ ವೆಂಕಟೇಶ್ವರ ಸ್ತೋತ್ರ ಪಠಿಸಿರಿ.



**ಧನಸ್ಸು**

ವೃತ್ತಿ ಜೀವನಕ್ಕೆ ಸಹಾಯ ಮಾಡಲಿದ್ದೀರಿ. ಪ್ರೀತಿ ಪ್ರೇಮದಲ್ಲಿ ಇರುವವರಿಗೆ ಬಂಧ ಇನ್ನಷ್ಟು ಗಟ್ಟಿಯಾಗಲಿದೆ. ಸೇವಾ ವಲಯ ಅಥವಾ ವ್ಯಾಪಾರ ಕ್ಷೇತ್ರದಲ್ಲಿ ಇರುವವರಿಗೆ ಏಳ್ಗೆ ಇದೆ. ಹಣಕಾಸು ಹೂಡಿಕೆಯಲ್ಲಿ ಅಂದುಕೊಂಡಂಥ ಫಲಿತಾಂಶ ದೊರೆಯಲಿದೆ. ಸೋದರ ಸಂಬಂಧಿಗಳ ಜತೆಗಿನ ಬಾಂಧವ್ಯ ಗಟ್ಟಿಯಾದಲಿದೆ. ಶುಭದಿನ 26. ಗುರು ರಾಘವೇಂದ್ರ ರಾಯರ ಆರಾಧನೆ ಮಾಡಿರಿ



**ಮಕರ**

ಮನೆ ದುರಸ್ತಿ ಹಾಗೂ ಅಲಂಕಾರಕ್ಕೆ ಹೆಚ್ಚಿನ ಖರ್ಚು ಮಾಡಲಿದ್ದೀರಿ. ಪೋಷಕರ ಜತೆಗಿನ ಬಾಂಧವ್ಯ ಇನ್ನಷ್ಟು ಗಟ್ಟಿಯಾಗುತ್ತದೆ. ಮಕ್ಕಳು ಕೌಶಲವನ್ನು ಹೆಚ್ಚಿಸಿಕೊಳ್ಳುವುದಕ್ಕೆ ಸಹಾಯ ಮಾಡಲಿದ್ದೀರಿ. ವೈಯಕ್ತಿಕ ಸಂಬಂಧದಲ್ಲಿ ಈ ಹಿಂದೆಂದಿಗಿಂತ ಹೆಚ್ಚು ಅಕ್ಕರೆ ಇರುತ್ತದೆ. ವಿದ್ಯಾರ್ಥಿಗಳು ಹಲವು ವಿಷಯದಲ್ಲಿ ಪರಿಣತಿ ಪಡೆಯುವ ಅವಕಾಶ ಇದೆ. ಶುಭದಿನ 30. ಶಿವಕವಚ ಪಠಣ ಮಾಡಿರಿ.



**ಕುಂಭ**

ರಾಜಕೀಯ ಸಾಮಾಜಿಕ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುವವರಿಗೆ ಹೆಸರು, ಗೌರವ ಪಡೆಯಲು ಅತ್ಯುತ್ತಮ ಅವಕಾಶ ದೊರೆಯುತ್ತದೆ. ತಾಂತ್ರಿಕ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುವವರಿಗೆ ಉತ್ತಮ ಸಮಯ ಇದು. ಆದರೆ ಯಾವುದೇ ಕೆಲಸಕ್ಕೆ ಹೆಚ್ಚು ಶ್ರಮ ಹಾಕಬೇಕಾಗುತ್ತದೆ. ವಾರದ ಕೊನೆಗೆ ಕೆಲವು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಶುಭದಿನ 28. ಆದಿತ್ಯ ಹೃದಯ ಪಠಣ ಮಾಡಿರಿ.



**ಮೀನ**

ಸ್ಥಿರಾಸ್ತಿ ವ್ಯವಹಾರಗಳಿಗೆ ಸಂಬಂಧಿಸಿದಂತೆ ಪ್ರಗತಿ ಇದೆ. ಪೋಷಕರ ಜತೆಗೆ ಈ ಹಿಂದೆ ಮನಸ್ತಾಪಗಳು ಆಗಿದ್ದಲ್ಲಿ ಅವುಗಳನ್ನು ನಿವಾರಣೆ ಮಾಡಿಕೊಳ್ಳಲಿದ್ದೀರಿ. ಕುಟುಂಬದಲ್ಲಿನ ಒಗ್ಗಟ್ಟು ಎಷ್ಟು ಮುಖ್ಯ ಎಂಬ ವಿಚಾರ ನಿಮಗೆ ಮನದಟ್ಟಾಗುತ್ತದೆ. ಅದನ್ನು ಸಾಧಿಸಲು ನಾನಾ ದಾರಿಯನ್ನು ಕಂಡುಕೊಳ್ಳುತ್ತೀರಿ. ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕಾಗುತ್ತದೆ. ಶುಭದಿನ 31. ಶ್ರೀರಾಮರಕ್ಷಾ ಸ್ತೋತ್ರ ಓದಿರಿ.